# ಲಂಕೇಶರ ಕಣ್ಣಲ್ಲಿ ಗಾಂಧೀಜಿ

**ಕಾಂತರಾಜ ಯಾದವ್ ಸಿ.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 02/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035140**

## ABSTRACT:

ಗಾಂಧೀಜಿಯವರು ಹುಟ್ಟಿ 156 ವರ್ಷಗಳಾಗಿವೆ. ಅವರ ಬದುಕಿನ ಬಗೆಗೆ ಚರ್ಚೆ, ಬರಹ, ಸ್ಮರಣೆ-ಸ್ತುತಿ ನಡೆಯುತ್ತಲೇ ಇವೆ. ಭಾರತದ ಇತರೆ ವ್ಯಕ್ತಿಗಳು ಜಾತಿ, ಧರ್ಮ, ಪಂಥಗಳಿಗೆ ಒಳಗಾದಂತೆ ಮಹಾತ್ಮಗಾಂಧಿಯವರು ಸುಲಭಕ್ಕೆ ಒಳಗಾಗದೆ ಇರುವುದು ಅವರ ಬದುಕಿನ ರೀತಿಯನ್ನು ಬಿಂಬಿಸುವಂತದ್ದು. ದೀರ್ಘಕಾಲ ಭಾರತದ ರಾಜಕೀಯ, ಸಾಮಾಜಿಕ ಬದುಕಿನಲ್ಲಿದ್ದ ಗಾಂಧೀಜಿಯವರು ಇಂದಿಗೂ 'ಅನ್ಯ'ರಾಗಿಯೇ ಇರುವಂತಾಗಿದೆ. ಅನ್ಯ ನಂತೆ ಕಂಡರೂ ಕೂಡ ಪ್ರಸ್ತುತದಲ್ಲಿಯೂ ಒಂದಲ್ಲಾ ಒಂದುರೀತಿಯಲ್ಲಿ ಪ್ರಸ್ತುತರಾಗುತ್ತಲೇ ಇದ್ದಾರೆ. ಗಾಂಧೀಜಿಯವರ ಸತ್ಯಾಗ್ರಹ, ಉಪವಾಸ, ಶ್ರಮದ ಬದುಕು, ಅಸ್ಪೃಶ್ಯತೆಯ ನಿವಾರಣೆ, ಬ್ರಹ್ಮಚರ್ಯ, ಟ್ರಸ್ಟೀಶಿಪ್ ಹೀಗೆ ಹಲವು ನೆಲೆಗಳಲ್ಲಿ ಬದುಕಿದ್ಧ ಗಾಂಧೀಜಿಯವರ ಬದುಕು ಪರ-ವಿರೋಧ ಚರ್ಚೆಗಳಿಗೆ ಒಳಗಾಗುತ್ತಲೇ, ಪ್ರಸ್ತುತಕ್ಕೆ ಮುಖಾಮುಖಿಯಾಗುತ್ತಿರುತ್ತಾರೆ. ವಸಾಹತು ಬದುಕಿನ ಕ್ರಮಕ್ಕೆ ಒಳಗಾಗಿರುವ ಭಾರತೀಯರ ಬದುಕಿನ ಕ್ರಮವನ್ನು ಅರಿತ ಗಾಂಧೀಜಿ ಅವರ ಆಲೋಚನೆಗಳು ಮತ್ತೆ ಮುನ್ನೆಲೆಗೆ ಬರುವ ಅಗತ್ಯ ಈ ಹೊತ್ತಿನದು. ಭಾರತದಂತಹ ಜಾತಿವಾದಿ, ಕೋಮುಗ್ರಸ್ಥ ಮನಸ್ಥಿತಿಯ ದೇಶದಲ್ಲಿ ಕುವೆಂಪು, ಅಂಬೇಡ್ಕರ್, ಗಾಂಧೀಜಿ ಮುಂತಾದವರು ಇಂದು ಅವರದೇ ಹಿಂಬಾಲಕರ ಕೈಗೆ ಸಿಕ್ಕಿ ಅವರ ಆಲೋಚನೆಗಳು,ವ್ಯಕ್ತಿತ್ವ ಎಲ್ಲವೂ ಛಿದ್ರಗೊಳ್ಳುತ್ತಿರುವ ಹೊತ್ತಿನಲ್ಲಿ ಇಂತಹವರಿಂದ ರಕ್ಷಿಸಿಕೊಳ್ಳಬೇಕೆಂದು ಲಂಕೇಶ್ ಹೇಳುತ್ತಾರೆ. ಜಾತಿ, ಧರ್ಮಕ್ಕೆ ಇಂತಹ ವ್ಯಕ್ತಿಗಳನ್ನು ಆಲೋಚನೆಗಳನ್ನು ಸೀಮಿತಗೊಳಿಸುತ್ತಿರುವ ಅಂಬೇಡ್ಕರ್ವಾದಿ, ಕುವೆಂಪುವಾದಿ, ಗಾಂಧೀವಾದಿಗಳಿಂದ ವಿಮುಖರಾಗಿ ನೇರವಾಗಿ ಓದಿನ ಮೂಲಕ ತಮ್ಮದೇ ರೀತಿಯಲ್ಲಿ ಗಾಂಧೀಜಿಯನ್ನು ಕಟ್ಟಿಕೊಂಡವರು ಲಂಕೇಶ್. ಗಾಂಧೀಜಿ ಬದುಕಿನ ವಿವರಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

## KEYWORDS:

ಗಾಂಧೀಜಿ, ಸತ್ಯಾಗ್ರಹ, ಸರಳತೆ, ಟ್ರಸ್ಟೀಷಿಪ್, ಧಾರ್ಮಿಕತೆ, ಜಾತಿ.

ಲಂಕೇಶ್ ರವರು ಸಾಹಿತಿ, ಪತ್ರಕರ್ತ, ನಾಟಕಕಾರ, ಸಿನಿಮಾ ನಿರ್ದೇಶಕ ಎಂದು ಹಲವಾರು ವಿಭಾಗಗಳಲ್ಲಿ ತಮ್ಮನ್ನು ಗುರ್ತಿಸಿಕೊಳ್ಳುತ್ತಾರೆ. ಲಂಕೇಶ್ ರ ಕಥೆ, ಕವನ, ನಾಟಕ, ವಿಮರ್ಶೆಗಳು, ಪತ್ರಿಕಾ ಬರಹಗಳು, ಬಿಡಿ ಬಿಡಿ ಲೇಖನಗಳನ್ನು ಓದುವಾಗ ನನಗೆ ವಿಶಿಷ್ಟವಾಗಿ ಅನಿಸಿದ್ದು, ಲಂಕೇಶರು ಗಾಂಧೀಜಿಯವರ ಬಗೆಗೆ ವಿವಿಧ ಸಂಧರ್ಭಗಳಲ್ಲಿ ದಾಖಲಿಸಿ ವಿಶ್ಲೇಶಿಸಿದ್ದು, ಗಾಂಧಿಯರನ್ನು ಪ್ರಸ್ತುತಕ್ಕೆ ಮುಖಾಮುಖಿಯಾಗಿಸಿದ್ಧು ನನಗೆ ಕುತೂಹಲವನ್ನುಂಟು ಮಾಡಿತು. ಲಂಕೇಶರು ಗಾಂಧೀಜಿಯ ಬಗೆಗೆ ಒಂದು ಪುಸ್ತಕದಲ್ಲಿ ದಾಖಲಿಸಿಲ್ಲ ಅವರ ಹಲವು ಕೃತಿಗಳಲ್ಲಿ ಈ ವಿವರಗಳಿವೆ. ಟೀಕೆ–ಟಿಪ್ಪಣಿ ಸಂಪುಟಗಳು, ಮರೆಯುವ ಮುನ್ನ ಸಂಪುಟಗಳು, ಬಿಟ್ಟುಹೋದ ಪುಟಗಳು ಸಂಪುಟಗಳು, ಸಾಹಿತಿ–ಸಾಹಿತ್ಯ ವಿಮರ್ಶೆ, ಕಂಡದ್ದು ಕಂಡಹಾಗೆ, ಹೀಗೆ ಹಲವು ಕಡೆಗಳಲ್ಲಿ ಅವರು ಗಾಂಧಿಕುರಿತ ಚಿಂತನೆಗಳು ಹರಡಿಕೊಂಡಿವೆ ಅವುಗಳನ್ನು ಒಗ್ಗೂಡಿಸಿ ನೋಡುವ ಒಂದು ಸಣ್ಣ ಪ್ರಯತ್ನ ಇದಾಗಿದೆ.

ನವೋದಯ ಕಾಲದ ಲೇಖಕರಿಗೆ ಗಾಂಧೀಜಿಯವರ ಹೋರಾಟ ಮತ್ತು ಬದುಕು ವಿಶಿಷ್ಟ ರೀತಿಯಲ್ಲಿ ಆಕರ್ಷಣೀಯವಾಗಿತ್ತು. ಇದರ ಪ್ರಭಾವವೆಂಬಂತೆ ಅನೇಕ ಲೇಖಕರು ಅವರ ಆದರ್ಶಗಳನ್ನು ಅಳವಡಿಸಿಕೊಂಡು ಗಾಂಧೀವಾದಿಗಳಾದರು. ಆ ಮೂಲಕ ಅವರ ಬರಹಗಳಲ್ಲಿ ಗಾಂಧೀಜಿ ಆದರ್ಶಪ್ರಾಯರಾಗಿ ಚಿತ್ರಿತರಾದರು. ನಂತರದ ಕಾಲಘಟ್ಟದ ಲೇಖಕರಿಗೆ ಗಾಂಧಿ ಅಷ್ಟಾಗಿ ಮುಖ್ಯವೆನಿಸಲಿಲ್ಲ. ಇಂತಹ ಸಂಧರ್ಭದಲ್ಲಿ ನವ್ಯಕಾಲದ ಲಂಕೇಶರಲ್ಲಿ ಮಾತ್ರ ಗಾಂಧಿಯವರು ವಿಶೇಷವಾಗಿ ಕಾಣುತ್ತಾರೆ. ವ್ಯಕ್ತಿವಿಶಿಷ್ಟ ಸಿದ್ಧಾಂತದ ಲೇಖಕರಾದ ಲಂಕೇಶರು ಗಾಂಧಿಯನ್ನು ನವೋದಯ ಲೇಖಕರಂತಾಗಲಿ, ಗಾಂಧಿವಾದಿಗಳ ರೀತಿಯಲ್ಲಿ ಆದರ್ಶ ನೆಲೆಯಲ್ಲಿ ಚಿತ್ರಿಸದೆ, ವ್ಯಕ್ತಿಯೊಬ್ಬ ತನ್ನ ಬದುಕಿನ ಏಳುಬೀಳುಗಳನ್ನು ಹೇಗೆ ಕಾಣುತ್ತಾನೆ ಎಂಬಂತೆ ಚಿತ್ರಿಸುತ್ತಾರೆ. ಲಂಕೇಶರು ಗಾಂಧೀಜಿಯ ಬಗೆಗೆ ಬಾಲ್ಯದಿಂದಲೂ ಈಗಿನ ವರೆಗೂ ಒಂದಲ್ಲ ಒಂದುರೀತಿಯಲ್ಲಿ ಮುಖಾಮುಖಿಯಾಗುತ್ತಿದ್ಧಾರೆ. “ನಾನು ತೀರಾ ಚಿಕ್ಕವನಿದ್ದಾಗ ಗಾಂಧಿನನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಕೊಡುವ ಮನುಷ್ಯನಂತೆ ಕಂಡರು; ಆಮೇಲೆ fother of the notion ಅನ್ನಿಸಿಕೊಂಡು, ಗಾಂಧಿ ನೆಹರೂ ಕೈಯ್ಯಲ್ಲಿ ಸಿಕ್ಕಿ ಚಿಂದಿಯಾದ ಭಾರತವನ್ನು ಹಿಂದಕ್ಕೂ ಬಿಡದೆ,ಮುಂದಕ್ಕೂ ಬಿಡದೆ ಇರುವ ವ್ಯಕ್ತಿಯಂತೆ ಕಂಡರು. ಸ್ವಾತಂತ್ರ್ಯ ಗಳಿಸಿದ ಭಾರತ ವೈಜ್ಞಾನಿಕವಾಗಿ ಮುಂದುವರಿದು ಗಾಂಧಿಯ fod, ಹುಚ್ಚುಗಳನ್ನೆಲ್ಲಾ ಬಿಟ್ಟು ಆಧುನಿಕ, ಶ್ರೀಮಂತ ರಾಷ್ಟ್ರವಾಗಬೇಕೆಂದು ನಮಗೆಲ್ಲಾ ಅನ್ನಿಸಿತು. ಆದರೆ ರಾಷ್ಟ್ರದ ಬದುಕು ವ್ಯಕ್ತಿಯ ಬದುಕಿನಂತೆಯೇ ಜಟಿಲವಾದದ್ದು ಎಂಬುದು 1975ರಲ್ಲಿ ನಮಗೆ ತಿಳಿಯಿತು”[1] ಎನ್ನುತ್ತಾರೆ. ಗಾಂಧೀಜಿಯವರು ಪ್ರಚಾರಪ್ರಿಯರಾಗಿದ್ದರು, ದುರಂತದಲ್ಲೂ ಕಾವ್ಯವನ್ನು

ಧ್ಯಾನಿಸುವವರಂತೆ ನನಗೆ ಕಾಣುತ್ತಾರೆ ಎನ್ನುತ್ತಾರೆ.

ಚಿಕ್ಕಂದಿನಿಂದಲೂ ಗಾಂಧೀಜಿಯವರ ಬಗೆಗೆ ಆಳವಾಗಿ ಚಿಂತಿಸಿ, ಅವರ ಬಗೆಗಿನ ವ್ಯಾಪಕ ಅಧ್ಯಯನವನ್ನೂ ಕೈಗೊಂಡು ಅದನ್ನು ದಾಖಲಿಸುತ್ತಾ ಬರುತ್ತಾರೆ. ಲಂಕೇಶರೇ ಹೇಳುವಂತೆ ನಾನು ಗಾಂಧೀಜಿಯನ್ನು ಬೇರೆಯವರ ಪ್ರಭಾವ ಪ್ರೇರಣೆಯಿಂದಲ್ಲದೆ, ನನ್ನೊಳಗೆ ನಾನೇ ಗಾಂಧೀಜಿಯವರನ್ನು ಬೆಳೆಸಿಕೊಂಡೆ ಎನ್ನುತ್ತಾರೆ. ಅದರಲ್ಲಿ ಕೆಲವನ್ನು ದಾಖಲಿಸುವ ಪ್ರಯತ್ನ ನಾನು ಮಾಡುತ್ತಿದ್ದೇನೆ.

ಗಾಂಧೀಜಿಯವರ ಪ್ರಚಾರ ಪ್ರೀಯತೆಯನ್ನು ಲಂಕೇಶ್ ಚಿತ್ರಿಸುವುದು ಹೀಗೆ "ಗಾಂಧೀಜಿ ತರಹದವರಿಗೂ ಈ ಸುದ್ಧಿಯಲ್ಲಿರುವ ಗೀಳು ಇತ್ತು. ಅವರಿಗೆ ಪ್ರಬಲ ಕಾರಣವಿತ್ತು. ಅವರ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ನಮ್ಮ ಜನ ಮಾತ್ರವಲ್ಲ, ಇಡೀ ಜಗತ್ತು ಓದಬೇಕೆಂಬುದು, ತಮ್ಮ ಚಳವಳಿಗೆ ಜಗತ್ತಿನ ಬೆಂಬಲದೊರೆಯಬೇಕೆಂಬುದು ಅವರ ಆಸೆಯಾಗಿತ್ತು, ಆದರೆ ಪ್ರಚಾರ ಅಪಾಯದ್ದಾಗಿತ್ತು. ಗಾಂಧೀಜಿ ಕೂಡ ಕ್ಷುಲ್ಲಕ ವ್ಯಕ್ತಿಯಂತೆ ಪ್ರಚಾರಕ್ಕಾಗಿಯೇ ದಲಿತ ಕಾಲೋನಿಯಲ್ಲಿ ಕೂತು ಜಗತ್ತಿನ ಮುಖ್ಯ ಟಿವಿ, ವೃತ್ತಪತ್ರಿಕೆಯ ವರದಿಗಾರರೆದುರು ನೂಲುತ್ತಿದ್ದರು. ನೂಲುವುದು, ಉಪ್ಪಿಗಾಗಿ ಯಾತ್ರೆಮಾಡುವುದು ಸಂಕೇತವಾದದ್ದು ಹೀಗೆ"[2] ಎನ್ನುತ್ತಾರೆ. ಇದಕ್ಕೂ ಮುಂದುವರೆದು ನೋಡುವುದಾದರೆ, ಗಾಂಧೀಜಿಯವರಿಗೆ ಅಧಿಕಾರದ ಬಗೆಗಿನ ಮಿತಿಗಳೂ ಗೊತ್ತಿದ್ದವು. ಆ ಮಿತಿಗಳ ಆಚೆಗೂ ಗಾಂಧೀಜಿಯವರ ಆಸಕ್ತಿ ಇತ್ತು. ತಾವು ಅಧಿಕಾರವಿಲ್ಲದೆಯೂ ಸಾಮಾಜಿಕವಾಗಿರಬಹುದು, ಅದಕ್ಕಿಂತಲೂ ಹೆಚ್ಚಿನದನ್ನು ಸಾಧಿಸಬಹುದು ಎಂದು ತೋರಿಸಿದ್ದನ್ನು ಲಂಕೇಶ್ ಗುರುತಿಸುತ್ತಾರೆ. ಈ ಸಂಧರ್ಭದಲ್ಲಿ ಬುದ್ಧನನ್ನು ನೆನೆಯುತ್ತಾರೆ. ಬುದ್ಧ ಮತ್ತು ಗಾಂಧಿ ಇಬ್ಬರಿಗೂ ಕೂಡ ಅಧಿಕಾರವನ್ನು ಪಡೆಯಲು ಯಾವುದೇ ತಡೆಗಳಿರಲಿಲ್ಲ ಎಂಬುದು ನೆನೆಪಿಡಬೇಕು. ಅದನ್ನು ಲಂಕೇಶ್ ಹಿಡಿದಿರುವ ಚಿತ್ರಿಣ ಬಹು ಸೂಕ್ಷ್ಮವಾದದ್ದು. "ಭಾರತಕ್ಕೆ ಸ್ವಾತಂತ್ರ್ಯ ಬಂದು ನೆಹರೂ, ಪಟೇಲರೆಲ್ಲ ರಾಜಕೀಯ ಅಧಿಕಾರದ ಮೂಲಕ, ಆಡಳಿತಯಂತ್ರದ ಮೂಲಕ ರಾಷ್ಟ್ರವನ್ನು ಮುನ್ನಡೆಸಲು ಸಿದ್ಧವಾಗಿದ್ಧ ಕ್ಷಣ. ಈ ಬಗೆಯ ಅಧಿಕಾರದ ಮಿತಿ ಗಾಂಧೀಜಿಗೆ ಗೊತ್ತಿತ್ತು. ಬುದ್ಧನಂತೆಯೇ ಗಾಂಧೀಜಿ ಕೂಡ ಭಾರತೀಯ ಮನುಷ್ಯ ಕಳಚಿಕೊಳ್ಳಬೇಕಾದ ಪ್ರವೃತ್ತಿಗಳು, ದೌರ್ಬಲ್ಯಗಳು ಆಡಳಿತದ ಹಿಡಿತಕ್ಕೆ ಸಿಕ್ಕಲಾರವು ಎಂದು ನಂಬಿದ್ಧರು. ಭಾರತದಲ್ಲಿ ಮತೀಯ ಹಿಂಸೆ, ಪರಸ್ಪರ ಸಂಶಯ ತುಂಬಿದ್ದಾಗ ಅಧಿಕಾರದ ವೈಭವದಲ್ಲಿ ನಾಯಕರು ಮೈ ಮರೆತಿದ್ಧರು. ಅಂದರೆ ಸಿದ್ಧಾರ್ಥ ರಾಜನಾಗಿ ಆಡಳಿತ ನಡೆಸಿದ್ಧರೆ ಏನೇನು ಸಾಧಿಸಬಹುದಾಗಿತ್ತೋ ಅದಕ್ಕಿಂತ ಹೆಚ್ಚಿನದನ್ನು ಜ್ಞಾನೋದಯ ಹುಡುಕಿಹೋಗಿ ಪಡೆದಿದ್ಧ. ನೆಹರೂ, ಪಟೇಲ್ ಸಿದ್ಧಾರ್ಥನ ರಾಜತ್ವ ಪ್ರತಿನಿಧಿಸಿದರೆ ಗಾಂಧೀಜಿಯ ಏಕಾಂಗಿತನ, ನೋವು ಬುದ್ಧನ ಜ್ಞಾನದ ಸ್ಥಿತಿ ಪ್ರತಿನಿಧಿಸಿತ್ತು"[3] ಎನ್ನುತ್ತಾರೆ. ಲಂಕೇಶ್ ರು ಗಾಂಧಿಯಾಗಲಿ

ಬುದ್ಧನಲ್ಲಾಗಲಿ ಕಾಣುವುದು ಮನುಷ್ಯಪರವಾದ ದಯಾಗುಣವನ್ನು. ಅದನ್ನು ಹೇಳುತ್ತಾ "ಮನುಷ್ಯನ ಅಸಹಾಯಕತೆ, ನೋವನ್ನು ಬಲ್ಲ ಈ ಇಬ್ಬರೂ ತಮ್ಮ ಕೈಲಾದದ್ದನ್ನೆಲ್ಲಾ ಮಾಡಿ ಮನುಕುಲದ ನೋವು ಕಮ್ಮಿ ಮಾಡುತ್ತಿದ್ದರು. ಖೋಟಾ ಸಂತರು, ಯಕ್ಷಿಣಿ, ಪವಾಡ ಮಾಡಿದರೆ ಈ ಮನುಷ್ಯರು ಮನುಷ್ಯರಾಗಿಯೂ ಪ್ರೀತಿ, ನೆರವು ನೀಡುತ್ತಿದ್ದರು"[4] ಎನ್ನುತ್ತಾರೆ.

ಈ ಅಂಶಗಳು ಸೂಚಿಸುವುದು ಮನುಷ್ಯನಲ್ಲಿರಬಹುದಾದ ಸಾಮಾನ್ಯತೆಯ ಅಂಶಗಳನ್ನು, ಗಾಂಧೀಜಿಯವರು ಮನುಷ್ಯ ಸಹಜ ಗುಣಗಳಿರುವಂತಹವರು, ಅವರಲ್ಲಿಯೂ ಮನುಷ್ಯನಲ್ಲಿರಬಹುದಾದ ಎಲ್ಲ ದೌರ್ಬಲ್ಯಗಳಿದ್ದವು. ಈ ದೌರ್ಬಲ್ಯಗಳನ್ನು ಮೀರುವುದು ಮುಖ್ಯ. ಅದರಾಚೆಗಿನ ಬದುಕನ್ನು ಗಾಂಧೀಜಿ ಗ್ರಹಿಸುತ್ತಿದ್ಧರು. "ಯಾವನಾದರೂ ಒಬ್ಬ ವ್ಯಕ್ತಿ ಮನುಷ್ಯನ ಅತ್ಯಂತ ಖಾಸಗಿಯಾದ ಭಾವನೆಗಳಿಂದ ಹಿಡಿದು ಮನುಷ್ಯನ ಪ್ರತಿಯೊಂದು ಸಾಮಾಜಿಕವಾದ ಮುಖದವರೆವಿಗೂ ಬಹಳ ತೀವ್ರವಾಗಿ ಯೋಚಿಸಿ, ಕಷ್ಟಗಳಿಗೆ ಪರಿಹಾರವನ್ನು ಕಂಡುಹಿಡಿದ ಯಾರಾದರೂ ಒಬ್ಬ ವ್ಯಕ್ತಿಯಿದ್ಧರೆ ಅವರು ಗಾಂಧೀಜಿ. ಗಾಂಧೀಜಿ ನೀವು ಬಹಳ ಕಷ್ಟದಲ್ಲಿದ್ದಾಗ, ಸಾಮಾಜಿಕ ತೊಂದರೆಯಲ್ಲಿದ್ಧಾಗ, ಮಾನಸಿಕ ತೊಂದರೆಯಲ್ಲಿದ್ದಾಗ, ದುಷ್ಟರ ಭಯದಲ್ಲಿದ್ದಾಗ ಸಹಾಯವಾಗ್ತಾರೆ. ಜೊತೆ ಜೊತೆಗೆ ಒಂದು ಸಮಾಜಕ್ಕೆ ಆರ್ಥಿಕ ತೊಂದರೆಗಳಷ್ಟೇ, ರಾಜಕೀಯ ತೊಂದರೆಗಳೂ ಮುಖ್ಯ. ಮಾನಸಿಕ ತೊಂದರೆಗಳಿಗೆ ನೀವು ಈಡಾದಾಗ ಅದನ್ನು ಕಡಿಮೆ ಮಾಡುವಂತಹ ವ್ಯಕ್ತಿ ಗಾಂಧೀಜಿ. ಅವರಲ್ಲಿ ತಪ್ಪುಗಳಿರಲಿಲ್ಲ ಅಂತಲ್ಲ ಗಾಂಧೀಜಿ ಬಹಳ ಪ್ರಚಾರ ಪ್ರಿಯರಾಗಿದ್ಧರು, ಕೆಲವು ವಿಷಯಗಳಲ್ಲಿ ತಪ್ಪಾಗಿ ಯೋಚಿಸ್ತಾ ಇದ್ಧರು, ಗಾಂಧೀಜಿ ಹುಲು ಮಾನವರ ತರಹ ಸಣ್ಣ ಪುಟ್ಟ ತಪ್ಪುಗಳನ್ನೂ ಮಾಡ್ತಾ ಇದ್ರು, ಈ ತಪ್ಪುಗಳಿಂದಾಗಿಯೇ ಗಾಂಧೀಜಿ ನಮ್ಮಂತಹ ಸಾಮಾನ್ಯರಲ್ಲೂ ಕೂಡ ಉತ್ತಮಿಕೆಯ ಭರವಸೆಯನ್ನು ಹುಟ್ಟಿಸ್ತಾರೆ. ಒಬ್ಬ ವ್ಯಕ್ತಿ ಪರಿಪೂರ್ಣವ್ಯಕ್ತಿ ಆಗಿದ್ರೆ ಅವನ ಬಗ್ಗೆ ನಮಗೆ ಕುತೂಹಲ ಇರೋಲ್ಲ. ಅವನಿಂದ ನಮಗೆ ಅಷ್ಟು ಉಪಯೋಗ ಆಗೋಲ್ಲ. ಒಬ್ಬ ವ್ಯಕ್ತಿ ಮನುಷ್ಯನ ದೌರ್ಬಲ್ಯಗಳ ಮತ್ತು ಶಕ್ತಿಯ ಹತ್ತಿರ ಇರೋದಾದ್ರೆ ಅದ್ರಿಂದ ನಮಗೆ ಬಹಳ ಸಹಾಯ ಆಗುತ್ತೆ. ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಉದ್ಧಾರ ಕೂಡ ಸಾಧ್ಯ ಅನ್ನೋ ಆಸೇನ ಗಾಂಧೀಜಿ ಹುಟ್ಟಿಸ್ತಾರೆ. ಹೀಗಾಗಿ ದಿನ ನಿತ್ಯದ ಕೆಲಸಗಳಲ್ಲಿ ತೊಡಗಿರುವ ವ್ಯಕ್ತಿ ದಿನ ನಿತ್ಯದ ದಬ್ಬಾಳಿಕೆ ಅಹಂಕಾರಗಳನ್ನು ಎದುರಿಸುವ ವ್ಯಕ್ತಿ ಇವರೆಲ್ಲರಿಗೂ ಮುಖ್ಯ ಆಗೋದ್ರಿಂದ ಗಾಂಧೀಜಿ ನಮ್ಮಂತೋರಿಗೆ ಮುಖ್ಯ ಆಗ್ತಾರೆ"[5] ಗಾಂಧೀಜಿಯ ಪ್ರತಿಭಟನೆ, ಅಭಿವ್ಯಕ್ತಿ ಎಲ್ಲವುಗಳೂ ಕೂಡ ಇಂದಿಗೂ ಒಂದಲ್ಲ ಒಂದು ರೀತಿಯಲ್ಲಿ ಚಾಲನೆಗೊಳ್ಳುತ್ತಲೇ ಇವೆ. ಸಾಮಾನ್ಯ ವ್ಯಕ್ತಿಯೊಬ್ಬ ವ್ಯವಸ್ಥೆಯ ಎದುರು ಕೈಗೊಳ್ಳುವ ಶಾಂತಿಯುತ ಪ್ರತಿಭಟನೆ ಕೈಗೊಳ್ಳುವದರಿಂದ ಹಿಡಿದು,

ಅಧಿಕಾರದ ಹಿಡಿದು ಸರ್ಕಾರ ರಚಿಸಿರುವ ಪಕ್ಷವೊಂದರ ಎದುರು, ಅಧಿಕಾರ ರಹಿತ ವಿರೋಧ ಪಕ್ಷದ ರಾಜಕಾರಣಿಗಳೂ ಸಹ ಅಹಿಂಸಾತ್ಮಕ ಪ್ರತಿಭಟನೆ ಮಾಡುವವರೆಗೆ ಗಾಂಧೀಜಿಯವರ ಹೋರಾಟ, ಪ್ರತಿಭಟನೆ ಇದೆ. ವ್ಯಕ್ತಿಯೊಬ್ಬ ಸಮಾಜದಲ್ಲಿ ಒಂದಲ್ಲ ಒಂದು ರೀತಿ ಅಧಿಕಾರಸ್ಥರಿಂದ ಅನ್ಯಾಯಕ್ಕೊಳಗಾಗುತ್ತಿದ್ದಾಗೆಲ್ಲ ಆತ ಬಳಸುವ ಅಸ್ತ್ರ ಅದು ಪ್ರತಿಭಟನೆ, ಹೋರಾಟ, ಅಹಿಂಸೆ, ಶಾಂತಿ ಇವುಗಳೇ ಆಗಿವೆ. ಗಾಂಧೀಜಿ ಇವುಗಳನ್ನು ಪರಿಣಾಮಕಾರಿಯಾಗಿ ಬಳಸಿರುವುದರಿಂದಲೇ ಇವು ಮತ್ತೆ ಮತ್ತೆ ಕಾರ್ಯಾಚರಣೆಗೆ ಬರುತ್ತಿರುತ್ತವೆ. ಲಂಕೇಶರೇ ಒಂದೆಡೆ ಹೇಳುವಂತೆ ಸಾಮಾನ್ಯನ ಮೂಕ ಅಳಲಿನಲ್ಲಿ ಸಾಮ್ರಾಜ್ಯಗಳನ್ನು ಬೀಳಿಸುವ ಶಕ್ತಿ ಇದೆ. ಎದುರಾಳಿಯಲ್ಲಿನ ಮನೋಪರಿವರ್ತನೆಯಿಂದ ಹಿಡಿದು, ಆತನು ನೈತಿಕವಾಗಿ ಬದಲಾಗಿಸುವ ನಿಟ್ಟಿನಲ್ಲಿ ಗಾಂಧೀಜಿಯವರು ಪ್ರಸ್ತುತ.

“ಗಾಂಧೀಜಿಯವರ ಸಾಂಕೇತಿಕ, ಸಹಜ ಪ್ರಭಾವ ಇನ್ನೂ ಆಳವಾಗಿವೆ. ಒಂದು ರೀತಿಯಲ್ಲಿ ಮಹಾ ಧಾರ್ಮಿಕ ವ್ಯಕ್ತಿಯಂತೆ ಕಾಣುತ್ತಿದ್ಧ ಗಾಂಧೀಜಿಯ ಜೊತೆ ಸ್ವಲ್ಪ ಕಾಲ ಇದ್ಧವರಿಗೂ ಅವರೊಬ್ಬ ಕೇವಲ ದಯೆ, ಪ್ರೀತಿಯ ಮನುಷ್ಯ ಎಂಬುದು ಗೊತ್ತಾಗುತ್ತಿತ್ತು. ಇದರಿಂದ ಧರ್ಮದ ಕಂದಾಚಾರಿಗೂ, ನಿರೀಶ್ವರವಾದಿಯಾದವನಿಗೂ ನಿರಾಶೆಯಾಗುತ್ತಿತ್ತು. ಆದರೆ ಎಲ್ಲಾ ಧರ್ಮದ ಜನಕ್ಕೆ ಹೊಸ ಆಶೆ ಸಿಗುತ್ತಿತ್ತು. ಇದಕ್ಕೆ ಮುಖ್ಯಕಾರಣ ಗಾಂಧಿ ಮನುಷ್ಯರೆಲ್ಲರ ಆಳದ ಪ್ರೀತಿಯ ಕಾತರಕ್ಕೆ, ಸ್ನೇಹ, ಸೌಹಾರ್ದತೆಯ ಬಾಯಾರಿಕೆಗೆ ಪ್ರವೇಶ ದೊರಕಿಸಿಕೊಳ್ಳುತ್ತಿದ್ಧರು. ನಮ್ಮಲ್ಲಿ ಧರ್ಮ, ಹಣ, ಠೇಂಕಾರದ ಆಚೆಗೆ ಎಲ್ಲರೂ ಅಸಹಾಯಕ ಮನುಷ್ಯರು ಅಥವಾ ಅಸಹಾಯಕರಲ್ಲದ ಅಪಾರ ಪ್ರೇಮದ, ವಿಶ್ವಾಸದ ಜೀವಿಗಳು. ಜೊತೆಗೇ ಗಾಂಧೀಜಿಯ ದಿನ ನಿತ್ಯದ ಘಟನೆಗಳೂ ಕೂಡ ನಮಗೆ ನೆರವಾಗಲಿವೆ. ಅನಗತ್ಯ ಸೇವಕರಿಲ್ಲದ ತಾವೇ ಮಾಡಿಕೊಳ್ಳುವ ಇಷ್ಟ, ಕಾಲು ನಡಿಗೆಯಲ್ಲಿ ಆಗುವಂಥಾದಕ್ಕೆ ವಾಹನ ಬಳಸದಿರುವ ಅಭ್ಯಾಸ, ಊಟ, ನಿದ್ಧೆ, ಮೈಥುನದ ಬಗ್ಗೆ ಅವರ ಅಭಿಪ್ರಾಯ ಈಗಲೂ ಸರಿಯಾಗಿವೆ. ಹಾಗೆಯೇ ಅಧಿಕಾರ ವಂತನ ದೌರ್ಬಲ್ಯ, ಮತ್ತು ಜನ ಸಾಮಾನ್ಯನ ಅಪಾರ ಶಕ್ತಿಯ ಬಗೆಗೆ ಅವರ ತಿಳುವಳಿಕೆ. ಗಾಂಧೀಜಿಯನ್ನು ನಿತ್ಯ ಕೊರೆಯುತ್ತಿದ್ದುದ್ದು ಆಧುನಿಕ ಸೈನ್ಯ, ಶಸ್ತ್ರಾಸ್ತ್ರ, ಬಾಂಬು ಮತ್ತು ಜನ ಸಾಮಾನ್ಯ ಸರ್ವಾಧಿಕಾರಿಯ ಮದಕ್ಕೆ ಜನಸಾಮಾನ್ಯನ ಸಿದ್ಧತೆ ಸವಾಲಾಗ ಬಲ್ಲದೆ ಎಂಬ ಪ್ರಶ್ನೆ ಅವರನ್ನು ಕಾಡುತ್ತಿತ್ತು. ತಮ್ಮ ನಂಬಿಕೆ ಜನ ಸಾಮಾನ್ಯನನ್ನು ಸದಾ ಕಾಲವೂ ಕಾಪಾಡಲಾರದು ಎಂಬುದು ಗಾಂಧೀಜಿಗೆ ಗೊತ್ತಿತ್ತು. ಹಿಟ್ಲರ್, ಸ್ಟಾಲಿನ್, ಮುಸಲೋನಿ ತರಹದವರು ಅವರ ಕಣ್ಣೆದುರಿಗೇ ಬಂದು ಹೋಗಿದ್ಧರು. ಆದ್ಧರಿಂದ ಗಾಂಧೀ ಯಾವಾಗಲೂ ವ್ಯಕ್ತಿಯ ಸರಳತೆ ಗೆಲ್ಲುವುದೆಂದು ತಿಳಿದಿರಲಿಲ್ಲ. ಆದರೆ ಏನೂ ಇಲ್ಲದ ಈ ದಿಕ್ಕೆಟ್ಟ ಜಗತ್ತಿನಲ್ಲಿ ಜನ ಸಾಮಾನ್ಯನ ಪ್ರೀತಿ, ಸಹನೆ, ಸವಾಲು

ಒಮ್ಮೆಯಾದರೂ ರಕ್ಷಿಸಬಹುದು ಎಂಬ ಸಣ್ಣ ನಂಬಿಕೆ ಅವರಿಗಿತ್ತು"[6]. ಗಾಂಧೀಜಿಯವರು ಸ್ವಯಂಸೇವೆಯ ಬಗೆಗೆ ಹೆಚ್ಚಿನ ಒಲವನ್ನು ತೋರುತ್ತಿದ್ದರು. ಆಧುನಿಕ ತಂತ್ರಜ್ಞಾನದ ಸಮಯದಲ್ಲಿ ನಿರುದ್ಯೋಗದಂತಹ ಸಮಸ್ಯೆಗಳಿಗೆ ಗಾಂಧೀಜಿಯವರ ಈ ಪರಿಕಲ್ಪನೆ ಹೆಚ್ಚು ಹತ್ತಿರವಿತ್ತು. ನೆಹರೂ ರವರು ಸ್ವಾತಂತ್ರ್ಯಾನಂತರ ಯಂತ್ರಾಕರಣಕ್ಕೆ ಆದ್ಯತೆಕೊಟ್ಟು ಅದನ್ನು ಸಮಾಜವಾದ ಎಂದು ಸಂಭ್ರಮಿಸುತ್ತಿದ್ದಾಗ, ಗಾಂದೀಜಿಯವರು ಸಮಾಜವಾದ ಎಂದರೆ ಜನರ ಶ್ರಮಶಕ್ತಿಯನ್ನು ಉತ್ಪಾದನೆಯಲ್ಲಿ ತೊಡಗಿಸುವುದು ನಿಜವಾದ ಸಮಾಜವಾದ ಎಂದು ವಾದಿಸುತ್ತಿದ್ದರು. ಯೂರೋಪಿನ ನಗರ ಆಧುನಿಕತೆಯ ನಂಬುತ್ತಿದ್ದವರಿಗೆ ಗಾಂಧೀಜಿಯವರ ಗ್ರಾಮೀಣದ ಸಮಾಜವಾದ ಅರ್ಥವಾಗುತ್ತಿರುಲಿಲ್ಲ. ಗಾಂಧಿಯವರ ವಿಕೇಂಧ್ರೀಕರಣ ತತ್ವವೇ ದೇಶಿ ಸಿದ್ಧಾಂತವೂ ಆಗಿತ್ತೆನ್ನುವುದು. ನಗರ ಕೇಂದ್ರಿತ ಚಿಂತನೆಗಳಿಗೆ ತಿಳಿಯಲಾಗದ ಚಿಂತನೆಯಾಗಿದೆ.

**ಗಾಂಧೀಜಿ ಮತ್ತು ಧಾರ್ಮಿಕತೆ, ಜಾತಿ, ಅವರ ಕೊಲೆ ಮತ್ತು ನಂತರದ ವಿಶ್ಲೇಷಣೆ:**

ಗಾಂಧೀಜಿಯವರು ತಮ್ಮ ಬಾಲ್ಯದಿಂದಲೂ ಕೂಡ ಧರ್ಮವನ್ನು ಕುರಿತು ಗಾಢವಾಗಿ ಆಲೋಚಿಸುತ್ತಿದ್ದವರು. ತಮ್ಮ ಪ್ರವಾಸಕಾಲದಲ್ಲಿ, ಬಿಡುವಿನ ವೇಳೆಯಲ್ಲಿ ಭಗವದ್ಗೀತೆಯನ್ನು ತಮ್ಮ ಜೊತೆಯಲ್ಲಿಯೇ ಇಟ್ಟುಕೊಂಡು ಓದುತ್ತಿದ್ದರು. ತಮ್ಮಲ್ಲಿನ ಅನೇಕ ಪ್ರಶ್ನೆಗಳಿಗೆ ಅವರು ಆಧ್ಯಾತ್ಮದಲ್ಲಿ ಉತ್ತರಗಳನ್ನು ಹುಡುಕುತ್ತಿದ್ದರು. ಆತ್ಮಸ್ಥೈರ್ಯಕ್ಕಾಗಿ ಆಧ್ಯಾತ್ಮವನ್ನು ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ತಮ್ಮ ಮಕ್ಕಳ ಮದುವೆಯಾದಾಗ ಗಾಂಧೀಜಿಯವರು ತಮ್ಮ ಸೊಸೆಯಂದಿರಿಗೆ ಭಗವದ್ಗೀತೆಯ ಒಂದೊಂದು ಪ್ರತಿಯನ್ನು ಕೊಟ್ಟಿದ್ದು ಅವರು ಧಾರ್ಮಿಕವಾಗಿ ಎಷ್ಟು ಆಳವಾಗಿ ಯೋಚಿಸುತ್ತಿದ್ದರು ಎಂದು ತಿಳಿಯಬಹುದು. ಲಂಕೇಶ್ ರವರು ನೀಡುವ ಗಾಂಧಿಯವರ ಈ ಧಾರ್ಮಿಕ ಚಿತ್ರಣ ನಿಜಕ್ಕೂ ದಂಗು ಬಡಿಸುವಂತಹುದು "ಗಾಂಧೀಜಿಗೆ ತಾವು ಹಿಂದೂ ಎಂದು ಹೇಳಿಕೊಳ್ಳಲು ಎಂದೂ ನಾಚಿಕೆಯಾಗುತ್ತಿರಲಿಲ್ಲ. ಏಕೆಂದರೆ ಇವರು ನಿಜಕ್ಕೂ ರಾಮಾಯಣಕಾಲದ ಕ್ರಿಯಾಶೀಲ ಹಿಂದೂವಾಗಿದ್ಧರು. ಗಾಂಧೀಜಿ ಎಂದೂ ದೇವಾಲಯಗಳಿಗೆ ಹೋಗುತ್ತಿರಲಿಲ್ಲ, ಆರ್ಚಕರು, ಪುರೋಹಿತರನ್ನು ಮನ್ನಿಸುತ್ತಿರಲಿಲ್ಲ, ಕಂದಾಚಾರಗಳು ಮತ್ತು ಮೂಢನಂಬಿಕೆಯವರನ್ನು ಸಹಿಸುತ್ತಿರಲಿಲ್ಲ ಎಂಬುದನ್ನು ನಾವು ನೆನೆಯಬೇಕು. ನಮ್ಮೆಲ್ಲರಂತೆ ಹುಟ್ಟಿದ ಗಾಂಧಿ ಜಾತೀಯತೆ, ವರ್ಣಾಶ್ರಮ ಧರ್ಮಗಳಿಗೆ ಒಳಗಾಗಿಯೇ ಅವನ್ನೆಲ್ಲ ಸ್ಫೋಟಿಸಿ ಹೊರಬಂದವರು. ಕ್ರಿಶ್ಚಿಯನ್ನರು, ಮುಸ್ಲಿಂರು, ಯಹೂದ್ಯರು, ಪಾರ್ಸಿಗಳು, ಹಿಂದೂಗಳು ಎಲ್ಲರೂ ಗಾಂಧೀಜಿಗೆ ಈ ನಾಡಿನ ಕಂದಾಚಾರ, ಸ್ವಾರ್ಥ, ಸ್ವಪ್ರತಿಷ್ಠೆ ಮತ್ತು ಸಣ್ಣತನದಲ್ಲಿ ನಿರ್ನಾಮವಾಗಿರುವ ಜನರಂತೆ ಕಾಣುತ್ತಿದ್ಧರು. ಇವರು ಸಾವಿರಾರು ವರ್ಷ ಬದುಕಿಬಂದ ರೀತಿಯಿಂದಾಗಿ ನಿರ್ವೀರ್ಯರೂ, ಕೊಳಕರೂ,

ಮೂಢನಂಬಿಕೆಯವರೂ, ತಮ್ಮ ಸಣ್ಣಪುಟ್ಟ ಗುಂಪುಗಳಾಚೆ ನೋಡಲೂ ಆಗದ ದುರ್ಬಲೂ ಆಗಿದ್ದು ಸ್ವಾತಂತ್ರ್ಯವನ್ನು ಸ್ವೀಕರಿಸಲೂ ಅನರ್ಹರಾಗಿದ್ಧರು. ಆದ್ಧರಿಂದಲೆ ಗಾಂಧೀಜಿ ಮೊದಲು ಈ ಜನಕ್ಕೆ ದುಡಿದುಣ್ಣುವ ರೀತಿಯ ಬಗ್ಗೆ, ಆತ್ಮಗೌರವದ ಬಗ್ಗೆ, ಬೇರೆ ಬೇರೆವಧರ್ಮಗಳನ್ನು ಸಗಹಿಸುವ ಬಗ್ಗೆ, ಎಲ್ಲ ಧರ್ಮಗಳ ಮೂಲಕ್ಕಿರುವ ದಯೆ, ಕುತೂಹಲ, ಹೊಣೆಗಾರಿಕೆಯ ಬಗ್ಗೆ ಕಲಿಸತೊಡಗಿದರು"[7] ಎನ್ನುತ್ತಾರೆ.

ಹೀಗೆ ಆಲೋಚಿಸುವಂತಹ ಗಾಂಧಿಯವರಿಗೂ ಕೂಡ ಧರ್ಮಾಂಧ, ಜಾತೀಯತೆಯನ್ನು ಬೆಂಬಲಿಸಿದವನೆಂದು ಈಗಲೂ ವಾದಿಸುವವರು ಇದ್ಧಾರೆ. ಆದರೆ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಜೊತೆಗೇ ಜಾತೀಯತೆಯ ವಿರುದ್ಧವೂ ಕೂಡ ತಮ್ಮದೇ ಆದ ಅತ್ಯಂತ ಸರಳ ರೀತಿಯಲ್ಲಿ ವರ್ತಿಸುತ್ತಿದ್ದರು. ಗಾಂಧಿಯವರು ಜಾತಿಯ ವಿರುದ್ಧ ಎಷ್ಟು ನಿಷ್ಟೂರರಾಗಿದ್ದರು ಎಂದರೆ ತಮ್ಮ ಮಗನ ಅಂತರ್ಜಾತಿ ವಿವಾಹವಾದ ಸಂಧರ್ಭದಲ್ಲಿ ಅನೇಕರು ವಿರೋಧಿಸಿದಾಗ ಅವರಿಗೆ ಈ ರೀತಿಯ ಅಂತರ್ಜಾತಿ ವಿವಾಹಗಳನ್ನು ಒಪ್ಪದಿದ್ದವರು ಹಿಂದೂವೇ ಅಲ್ಲ ಎಂದು ನೇರವಾಗಿ ಹೇಳಿದ್ಧರು. ಅಲ್ಲದೆ ಯಾವುದೇ ವಿವಾಹದ ಆಮಂತ್ರಣ ಬಂದಾಗ ಅದು ಅಂತರ್ಜಾತಿ ವಿವಾಹವಾಗಿದ್ದು, ವರದಕ್ಷಿಣೆಯಿಲ್ಲದ ವಿವಾಹವಾದರೆ ಮಾತ್ರ ಭಾಗವಹಿಸುತ್ತೇನೆ ಎನ್ನುವ ನೆಲೆಗೆ ಬಂದಿದ್ದರು. ಇಲ್ಲಿ ದಾಖಲಿಸ ಬೇಕಾದ ಮತ್ತೊಂದು ವಿಚಾರವೆಂದರೆ ಗಾಂಧೀಜಿಯವರ ಆಶ್ರಮದಲ್ಲಿ "ಕರ್ನಾಟಕದ ಹೆಣ್ಣುಮಗಳಾದ ಶ್ರೀಮತಿ ವೀರಮ್ಮ ಕೋಂ ಕರಿಯಪ್ಪ ಎರೆಸೀಮೆ ಇವರ ನೆನಹುಗಳು. ಇವರು ಗಾಂಧೀಜಿಯವರ ಆಶ್ರಮದಲ್ಲಿದ್ಧಾಗ ಇವರು ನೇಯುತ್ತಿದ್ಧ ನೂಲನ್ನೇ ಭಕ್ತಿಯಿಂದ ಬೇರೆಯಿಟ್ಟು ಈ ನೂಲಿನಿಂದ ನನಗೆ ಬೇರೆ ವಸ್ತ್ರಮಾಡಿರಿ ಎನ್ನುತ್ತಿದ್ದರು. ಅದರಂತೆ ಅವರು ಈ ನೂಲು ಬೇರೆಯಿಟ್ಟು ಅವರಿಗೆ ಅಡ್ಡಪಂಚೆ ಮಾಡಿಸಿಕೊಟ್ಟರೆ, ಆಹಾ ಈ ಬಟ್ಟೆ ಎಷ್ಟು ಪವಿತ್ರ ಇರುವುದು ಎಂದು ಆನಂದ ಪಡುತ್ತಿದ್ಧರು. ಯಾರಾದರೂ ಅತಿಥಿಗಳು ಬೆಟ್ಟಿಗೆ ಬಂದಾಗ್ಗೆ ಬಾಪೂ, ನಿಮ್ಮ ಕೈಯಿಂದ ನನಗೆ ಪ್ರಸಾದ ಕೊಡಿರಿ ಎಂದು ಕೇಳಿದರೆ ನನ್ನ ಕೈಯಿಂದ ಹಣ್ಣು ಕೊಡಿಸುತ್ತಿದ್ಧರು. ನೀವೇ ಸ್ವತಃ ಕೊಡಿರಿ ಎಂದು ಅತಿಥಿಗಳು ಕೇಳಿದರೆ ಈ ಹಣ್ಣೇ ಪವಿತ್ರ, ಇದರಲ್ಲಿ ದೇವರಿರುವನು. ಈ ಹುಡುಗಿ ಯಾರೆಂದು ಕೇಳುವಿರಾ? ನನ್ನ ಪ್ರೀತಿಯ ಮಗಳು. ಹರಿಜನ ಹುಡುಗಿ ನಿಮಗೆ ಮೆಚ್ಚಿಗೆ ಇರುವುದಿಲ್ಲವೋ ಎಂದು ಗಾಂಧೀಜಿ ಹೇಳಿದರೆ ಭಕ್ತಿಭಾವದಿಂದಲೇ ಅತಿಥಿಗಳು ಒಪ್ಪಿ ನನ್ನ ಕೈಯ್ಯಿಂದಲೇ ಹಣ್ಣು ತಕ್ಕೊಳ್ಳುತ್ತಿದ್ದರು"[8] ಎಂದು ಹೇಳುತ್ತಾರೆ. ಇದೇ ನೆಲೆಯಲ್ಲಿ ಮುಖ್ಯವಾಗಿ ಚರ್ಚಿತವಾಗ ಬೇಕಾದ ವಿಷಯ ಗಾಂಧೀಜಿಯವರ ಕೊಲೆ.

"ಗಾಂಧೀಜಿ ಭಾರತದ ಪ್ರಜೆಯೊಬ್ಬನಿಂದಲೇ ಕೊಲ್ಲಲ್ಪಟ್ಟಿದ್ದು,

ಹಿಂದೂವೊಬ್ಬನಿಂದಲೇ ಹತರಾದದ್ದು ಬದುಕಿನ ವಿಪರ್ಯಾಸಗಳಲ್ಲಿ, ಸೂಕ್ಷ್ಮಗಳಲ್ಲಿ ಮುಖ್ಯವಾದದ್ದಾಗಿತ್ತು. ಭಾರತದ ಜಾತಿಪದ್ಧತಿಯಲ್ಲಿಯ ಕ್ರೌರ್ಯ, ಇಲ್ಲಿಯ ಧರ್ಮದ ಜಿಜ್ಞಾಸೆಯಲ್ಲಿಯೇ ಅಡಗಿರುವ ಕೇಡಿತನ, ಇಲ್ಲಿರುವ ತರ್ಕ, ಪಾಂಡಿತ್ಯದಲ್ಲಿಯೇ ಇರುವ ವಂಚನೆ ಎಲ್ಲರನ್ನೂ ಬೆಚ್ಚಿಸಿದವು. ಇಲ್ಲಿ ನಮ್ಮ ನಾಡಿನ ವಿವೇಕಿಗಳೂ ಕೂಡ ಗಾಂಧೀಜಿಯ ಬದುಕಿನ ಅರ್ಥಪೂರ್ಣ ವಿಪರ್ಯಾಸಗಳ ಬಗ್ಗೆ ಗಾಢವಾಗಿ ಚಿಂತಿಸಲಿಲ್ಲ. ನಿಜವಾದ ಹಿಂದೂ ಆಗಿದ್ಧ ಗಾಂಧೀಜಿಯನ್ನು ಹಿಂದೂ ಒಬ್ಬ ಯಾಕೆ ಕೊಂದ? ಗಾಂಧೀಜಿ ಆರಾಧಿಸಿದ ಧರ್ಮಕ್ಕೂ, ಗೋಡ್ಸೆಯ ಜಾತಿಗೂ ಎಷ್ಟು ಸ್ಥರಗಳಲ್ಲಿ ಭಿನ್ನತೆ ಇದೆ. ಗಾಂಧೀಜಿ ಬೆಂಬಲಿಸಿದ ಸರಳತೆ ಮತ್ತು ಸಾಂಪ್ರದಾಯಕತೆ, ಅನಾಗರೀಕತೆ ಮತ್ತು ಶಿಲಾಯುಗದ ಮೌಢ್ಯತೆ ಖಂಡಿತ ಅಲ್ಲ? ಗಾಂಧೀಜಿ ಕೊಲೆಗೆ ಅವರ ಮುಗ್ಧತೆ, ಪ್ರೀತಿ, ಹಠಮಾರಿತನ, ರಾಜಕೀಯ ಇವುಳಲ್ಲಿ ಯಾವುದು ಎಷ್ಟರ ಮಟ್ಟಿಗೆ ಕಾರಣ? ಅವರಲ್ಲಿದ್ಧ ಕ್ರಿಸ್ತ, ಲಿಂಕನ್ ಮತ್ತು ಮಂಡೇಲಾ... ಹೇಗೆ ವಿಚಿತ್ರ ದ್ವಂದ್ವಗಳಲ್ಲಿ ಮುಳುಗಿಹೋದರು? ಎಂದು ಪ್ರಶ್ನಿಸುತ್ತಾರೆ. ಹೀಗೆ ಪ್ರಶ್ನಿಸುವ ಲಂಕೇಶರು ಮತ್ತೊಂದು ಕಡೆ ಹೀಗೆ ದಾಖಲಿಸುತ್ತಾರೆ. ಗಾಂಧೀಜಿ ಸತ್ತದ್ದು ಜಾತೀಯತೆಯ ವಿರುದ್ಧ ಹೋರಾಡಿದ್ಧಕ್ಕೆ. ಹಿಂಸೆಯ ವಾತಾವರಣದಲ್ಲಿ ಅಹಿಂಸೆಯನ್ನು ಹೊಮ್ಮಿಸಲು ಯತ್ನಿಸಿದ್ಧಕ್ಕೆ ಎಂಬುದು ಎಲ್ಲರಿಗೂ ಗೊತ್ತಿದೆ. ಗಾಂಧೀಜಿ ಮಡಿದಾಗ ಬರ್ನಾಡ್ ಶಾ ಹೇಳಿದರು ಈ ಬದುಕಿನಲ್ಲಿ ತೀರಾ ಒಳ್ಳೆಯವರಾಗಿರುವುದು ಎಷ್ಟು ಅಪಾಯಕರ ಎಂಬುದನ್ನು ಈ ಕೊಲೆ ತೋರುತ್ತದೆ''[9] ಎಂದು ದಾಖಲಿಸುತ್ತಾರೆ.

ಗಾಂಧೀಜಿಯ ಜ್ಯಾತ್ಯಾತೀತ, ಸರ್ವ ಸಹೋದರ ದಿಟ್ಟ ಹಿಂದೂವಿನ ಕಲ್ಪನೆ, ಸತ್ಯವನ್ನು ಎದುರಿಸಿ ಎಲ್ಲರನ್ನೂ ಪ್ರೀತಿಸಿ ಮುನ್ನಡೆಯಬಲ್ಲ ಭಾರತೀಯನ ಕಲ್ಪನೆ ಹಿಡಿಸುವುದಿಲ್ಲವೆಂದು ಎಲ್ಲರಿಗೂ ಗೊತ್ತು. ಗಾಂಧೀಜಿಯನ್ನು ಕೊಲ್ಲಬಲ್ಲಷ್ಟು ಕ್ರೌರ್ಯವಿರುವ ಹಿಂದೂ ಧರ್ಮ ನಮಗೆ ಕ್ರಿಯಾಶೀಲತೆ ತರಬಲ್ಲದೋ, ಎಲ್ಲ ಮಾನವರ ಆಳಕ್ಕೆ ಹೋಗಿ ಸ್ಪಂದಿಸಿದ ಗಾಂಧೀಜಿಯ ಹಿಂದೂ ಧರ್ಮ ಅದನ್ನು ತರಬಲ್ಲದೋ ಎಂಬುದನ್ನು ನಾವು ಯೋಚಿಸಬೇಕು.

ಗಾಂಧೀಜಿಯವರ ಕೊಲೆಯ ಬಗೆಗೆ, ಕೊಲೆಯ ಕುರಿತಂತೆ ಇದುವರೆಗೂ ಒಂದಲ್ಲಾ ಒಂದು ರೀತಿಯ ವಿಮರ್ಶೆ ನಡೆಯುತ್ತಲೇ ಇದೆ. ಇದರ ಆಚೆಗೆ ಗಾಂಧಿಯವರು ಪ್ರತಿಪಾದಿಸಿದ ಸತ್ಯಾಗ್ರಹ, ಅಹಿಂಸೆ, ಜಾತ್ಯಾತೀತ ತತ್ವಗಳು ಇಂದಿಗೂ ಜಾಗೃತಾವಸ್ಥೆಯಲ್ಲಿರುವುದನ್ನು ಕಾಣುತ್ತಿದ್ದೇವೆ, ಈ ಕುರಿತಂತೆಯೂ ಲಂಕೇಶರು ಚರ್ಚಿಸುತ್ತಾರೆ.

''ಗಾಂಧೀಜಿಯವರನ್ನು ಕೊಂದ ಶಕ್ತಿಗಳಿಗೆ ತಮ್ಮ ನಪುಂಸಕತೆಯ ಅರಿವಿಲ್ಲ.

ಭಿನ್ನಾಭಿಪ್ರಾಯ, ವಿಮರ್ಶೆ, ಪ್ರತಿಭಟನೆಯನ್ನು ಸಹಿಸಲಾಗದ ಗುಂಪುಗಳು ಮಾತ್ರ ಗಾಂಧೀಜಿಯ ಸಂದೇಶವನ್ನು ಮರೆಯುತ್ತಾರೆ. ನಪುಂಸಕನ ಕೋಪ ಮತ್ತು ದುರ್ಬಲ ದೈನ್ಯ –ಎರಡನ್ನೂ ಅರಿತಿದ್ದ ಗಾಂಧಿ ಈ ದೇಶದಲ್ಲಿ ಮೊತ್ತ ಮೊದಲ ಬಾರಿಗೆ ಭಾರತೀಯನೊಬ್ಬ ದಿಟ್ಟನಾಗಿದ್ದು ವಿನಯವಂತನಾಗಿರುವ; ಅಹಿಂಸಾವಾದಿಯಾಗಿದ್ದು ಆತ್ಮಗೌರವ ಹೊಂದಿದ ಸತ್ಯಾಗ್ರಹಿಯಾಗಿದ್ದೂ ಘೋರ ದೋಷವನ್ನು ಹತ್ತಿಕ್ಕಿಕೊಳ್ಳುವ ಪುರುಷತ್ವವುಳ್ಳ ಮನುಷ್ಯನಾಗುವುದನ್ನು ಆಶಿಸಿದರು ಅದೇ ಅವರ ಅಹಿಂಸೆ ಮತ್ತು ಜಾತ್ಯಾತೀತ ಸಂದೇಶ''[10] ಎನ್ನುತ್ತಾರೆ. ಇಂತಹ ಗಾಂಧೀಜಿಯ ಸಾವಿನ ನಂತರ ಅವರ ಅನುಯಾಯಿಗಳೇ ಎಬ್ಬಿಸಿದ ದುರಂತಗಳನ್ನೂ ಲಂಕೇಶ್ ದಾಖಲಿಸುತ್ತಾರೆ.

''ಗಾಂಧೀಜಿಯ ಬಗ್ಗೆ ಪೂರ್ತಿ ತಪ್ಪು ಕಲ್ಪನೆಗಳನ್ನು ಮೂಡಿಸಿದ ಅವರ ಅನುಯಾಯಿಗಳನ್ನೂ ಕೂಡ ಇಲ್ಲಿ ಮರೆಯಕೂಡದು. ವಿನೋಬಾ ಥರದವರಿಗೆ ಗಾಂಧೀಜಿಯೆಂದರೆ ಆಡಿನ ಹಾಲು, ಒಣ ಬ್ರಹ್ಮಚರ್ಯ, ಕೇವಲ ಚರಕದ ಸಾವಾಸ, ಗಿಡಮೂಲಿಕೆ, ಎಲ್ಲರಲ್ಲಿ ನಗೆತರಿಸುವ ಖೊಟ್ಟಿ ಗಾಂಭೀರ್ಯ, ಗೋರಕ್ಷಣೆ, ಗೀತೆಯನ್ನು ಪರಿಪರಿಯಾಗಿ ವರ್ಣಿಸುವುದು ಇತ್ಯಾದಿ, ಇತ್ಯಾದಿ. ನೆಹರೂ ಥರದವರಿಗೆ ಖಾದಿ ಭಂಡಾರಗಳನ್ನು ತೆರೆದು ವ್ಯಾಪಾರ ಮಾಡುವುದು, ಗಾಂಧಿ ಭವನಗಳನ್ನು ಕಟ್ಟಿಸಿ ಉದ್ಘಾಟಿಸುವುದು, ಗಾಂಧಿ ಜಯಂತಿ ಆಚರಿಸುವುದು ಇತ್ಯಾದಿ. ಮತಿಹೀನ ಸಂಪ್ರದಾಯ ಶರಣರಿಗೆ ಗಾಂಧಿ ಎಂದರೆ ಜಾತಿ ಪದ್ಧತಿಯನ್ನು ಸಂರಕ್ಷಿಸಿದವನು. ಬಂಡವಾಳಶಾಹಿಗಳಿಗೆ ಪೂರ್ತಿ ಪ್ರೋತ್ಸಾಹ ಕೊಟ್ಟವನು, ಬಿರ್ಲಾ ಭವನದಲ್ಲೇ ಅಸುನೀಗಿದ ಸಂಪ್ರದಾಯವಂತ ಎಂಬ ಭ್ರಮೆ''[11] ಹೀಗೆ ಗಾಂಧಿಯ ಮರಣಾನಂತರವೂ ಗಾಂಧೀಜಿಯವರ ತತ್ವಗಳನ್ನು ಅರ್ಥೈಸಿಕೊಳ್ಳದೆ ತಮ್ಮ ಸಿದ್ಧಾಂತಗಳಿಗೆ ತಕ್ಕಂತೆ ತಮ್ಮ ಮೂಗಿನ ನೇರಕ್ಕೆ ಗಾಂಧಿಯವರ ತತ್ವಗಳನ್ನು ಅನ್ವಯಿಸಿ ಕೊಳ್ಳುತ್ತಿರುವುದು ದುರಂತ. ತಾನು ನಂಬಿದ ಸಿದ್ದಾಂತಗಳು ಎಲ್ಲಾ ಕಾಲಕ್ಕೂ ಅನ್ವಯಿಸಲಾರವು ಎಂಬ ಅರುವಿರುವವರೂ, ತನ್ನ ಅಹಿಂಸೆ, ನೈತಿಕತೆಗಾಗಿ ತನ್ನ ಜೀವವನ್ನು ಬಲಿಕೊಟ್ಟವರು ಗಾಂಧಿ. ಇವತ್ತು ಗಾಂಧೀಜಿಯವರು ಗಾಂಧಿವಾದಿಗಳ ಕೈಯ್ಯಲ್ಲಿ ನಲುಗುತ್ತಿದ್ದು ಅವರಿಂದ ಗಾಂಧಿಯರನ್ನು ರಕ್ಷಿಸ ಬೇಕಿದೆ ಎನ್ನುತ್ತಾರೆ. ಗಾಂಧಿಯನ್ನು ಮರೆತದಿನ ಈ ದೇಶಕ್ಕೆ ಅಪಾಯ ಕಾದಿದೆ ಎನ್ನುತ್ತಾರೆ ಲಂಕೇಶ್.

ಲಂಕೇಶರು ಗಾಂಧಿಯನ್ನು ಇವಿಷ್ಟೇ ನೆಲೆಯಲ್ಲಲ್ಲದೆ ಇನ್ನೂ ಹಲವು ರೀತಿಯಲ್ಲಿ ಚರ್ಚಿಸಿದ್ದಾರೆ. ಗಾಂಧೀಜಿಯವರ ಟ್ರಸ್ಟೀಷಿಪ್ ಸಿದ್ಧಾಂತವನ್ನು ಲಂಕೇಶರು ಟೀಕಿಸುತ್ತಾರೆ. ತಮಗೆ ಸಹಾಯ ಮಾಡಿದರು ಎನ್ನುವ ಕಾರಣಕ್ಕಾಗಿ ಬಿರ್ಲಾ ನಂತಹ ಬಂಡವಾಳಶಾಹಿಯು ತನ್ನದೇ ಕಂಪೆನಿಯ ಕೂಲಿಕಾರ್ಮಿಕರು ಶೋಷಣೆಗೆ ಒಳಗಾಗಿದ್ದನ್ನು ಬರ್ಕ್ ವೈಟ್ ರವರುಗಾಂಧಿಗೆ ತಿಳಿಸಿದಾಗ ನಂಬದಂತಹ ಸ್ಥಿತಿಯನ್ನು

ತಲುಪಿದ್ದರು. ಗಾಂಧೀಜಿಯವರ ಇದೇ ಹಣಕಾಸಿನ ವ್ಯವಹಾರವೂ ಕಾಂಗ್ರೆಸ್ ಪಕ್ಷವನ್ನು ಬಂಡವಾಳಶಾಹಿಗಳ ಕೈಗೊಂಗೆಯಾಗುವಂತೆ ಮಾಡುವಲ್ಲಿ ಸಹಾಯಕವಾಯಿತು ಎಂದೂ ಕೂಡ ದಾಖಲಿಸುತ್ತಾರೆ. ಗಾಂಧಿಯವರು ರವೀಂದ್ರನಾಥ ಟ್ಯಾಗೂರರ ಕನಸಿನ ವಿದ್ಯಾಕೇಂದ್ರವಾದ ವಿಶ್ವಭಾರತಿಗಾಗಿ ಹಣಕಾಸಿನ ತೊಂದರೆಯಲ್ಲಿದ್ದಾಗ ಉದಾರವಾಗಿ ಖಾಲಿಚೆಕ್ ನೀಡಿ ಹಣ ಬರೆದು ಕೊಳ್ಳಲು ಬಿರ್ಲಾನೀಡಿದ ಚೆಕ್ ಅನ್ನು ನೀಡುತ್ತಾರೆ. ಹೀಗೆ ಮಹಾತ್ಮ ಮತ್ತು ಗುರುದೇವ ಎಂಬುವವರೂ ಕೂಡ ತಪ್ಪು ಮಾಡಬಲ್ಲವ ರಾಗಿದ್ದರು ಎಂದು ದಾಖಲಿಸುತ್ತಾರೆ. ಹೀಗೆ ಹಲವಾರು ಸಂಗತಿಗಳನ್ನು ರಾಜಕೀಯ, ಧಾರ್ಮಿಕ, ಸಾಮಾಜಿಕ ಆಯಾಮಗಳಲ್ಲಿ ಲಂಕೇಶರು ಗಾಂಧೀಜಿಯವರ ಬಗೆಗೆ ವಿವರಿಸುತ್ತಾರೆ, ಮತ್ತು ವಿಮರ್ಶಿಸುತ್ತಾರೆ.

**ಅಡಿ ಟಿಪ್ಪಣಿಗಳು:**

1. ಲಂಕೇಶ್ ಪಿ. & ಶ್ರೀಧರ ವಿ. ಎಸ್. (ಸಂಯೋಜನೆ). (2010). ಸಾಹಿತಿ ಸಾಹಿತ್ಯ ವಿಮರ್ಶೆ. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ. 75
2. ಲಂಕೇಶ್ ಪಿ. (2010). ಮರೆಯುವ ಮುನ್ನ: ಸಂಪುಟ 1 ರಿಂದ 5. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ. 168–169
3. ಲಂಕೇಶ್ ಪಿ. (2010). ಮರೆಯುವ ಮುನ್ನ: ಸಂಪುಟ 1 ರಿಂದ 5. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ. 145
4. ಲಂಕೇಶ್ ಪಿ. (2010). ಮರೆಯುವ ಮುನ್ನ: ಸಂಪುಟ 1 ರಿಂದ 5. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ. 129
5. ಲಂಕೇಶ್ ಪಿ. & ಶ್ರೀಧರ ವಿ. ಎಸ್. (ಸಂಯೋಜನೆ). (2010). ಸಾಹಿತಿ ಸಾಹಿತ್ಯ ವಿಮರ್ಶೆ. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ 236–37
6. ಲಂಕೇಶ್ ಪಿ. (2010). ಟೀಕೆ–ಟಿಪ್ಪಣಿ: ಸಂಪುಟ–3. ಲಂಕೇಶ್ ಪ್ರಕಾಶನ. ಬೆಂಗಳೂರು. ಪು. ಸಂ 24–25
7. ಲಂಕೇಶ್ ಪಿ. (2014). ಬಿಟ್ಟು ಹೋದ ಪುಟಗಳು: ಸಂಪುಟ–1. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ 71
8. ಲಂಕೇಶ್ ಪಿ. (2010). ಮರೆಯುವ ಮುನ್ನ: ಸಂಪುಟ 1 ರಿಂದ 5. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ 69
9. ಲಂಕೇಶ್ ಪಿ. (2010). ಟೀಕೆ–ಟಿಪ್ಪಣಿ: ಸಂಪುಟ–3. ಲಂಕೇಶ್ ಪ್ರಕಾಶನ. ಬೆಂಗಳೂರು. ಪು. ಸಂ 252
10. ಲಂಕೇಶ್ ಪಿ. & ಶ್ರೀಧರ ವಿ. ಎಸ್. (ಸಂಯೋಜನೆ). (2010). ಸಾಹಿತಿ ಸಾಹಿತ್ಯ ವಿಮರ್ಶೆ. ಲಂಕೇಶ್ ಪ್ರಕಾಶನ. ಬೆಂಗಳೂರು.

11. ಲಂಕೇಶ್ ಪಿ. (2014). ಬಿಟ್ಟು ಹೋದ ಪುಟಗಳು: ಸಂಪುಟ–1. ಲಂಕೇಶ್ ಪ್ರಕಾಶನ. ಬೆಂಗಳೂರು. ಪು.ಸಂ. 49

## ಪರಾಮಾರ್ಶನ ಗ್ರಂಥಗಳು:

1. ಲಂಕೇಶ್ ಪಿ. (2014). ಬಿಟ್ಟು ಹೋದ ಪುಟಗಳು: ಸಂಪುಟ–1. ಲಂಕೇಶ್ ಪ್ರಕಾಶನ. ಬೆಂಗಳೂರು.
2. ಲಂಕೇಶ್ ಪಿ. (2010). ಟೀಕೆ–ಟಿಪ್ಪಣಿ: ಸಂಪುಟ–3. ಲಂಕೇಶ್ ಪ್ರಕಾಶನ. ಬೆಂಗಳೂರು.
3. ಲಂಕೇಶ್ ಪಿ. & ಶ್ರೀಧರ ವಿ. ಎಸ್. (ಸಂಯೋಜನೆ). (2010). ಸಾಹಿತಿ ಸಾಹಿತ್ಯ ವಿಮರ್ಶೆ. ಲಂಕೇಶ್ ಪ್ರಕಾಶನ. ಬೆಂಗಳೂರು.
4. ಲಂಕೇಶ್ ಪಿ. (2010). ಮರೆಯುವ ಮುನ್ನ: ಸಂಪುಟ 1 ರಿಂದ 5. ಲಂಕೇಶ್ ಪ್ರಕಾಶನ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.